1964 ರಿಂದ 1969ರವರೆಗೆ ಅರಣ್ಯ ರಕ್ಷಣಾ ಕಾಯ್ದೆ ಜಾರಿಗೆ ಬರುವುದಕ್ಕೆ ಮುಂಚಿನಿಂದ ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ಜಮೀನುಗಳನ್ನು ಬಿಡುಗಡೆ ಮಾಡಿದ್ದರಿಂದ ದಿನಾಂಕ 16.2.93ರಂದು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಈ ಜಮೀನುಗಳು ಅರಣ್ಯ ಸಂರಕ್ಷಣಾ ಕಾಯ್ದೆಯ ವಿಧಿಗಳನ್ನು ಅನ್ವಯಿಸುವುದಿಲ್ಲ. ಆದುದರಿಂದ ಇವುಗಳ ಬಗ್ಗೆ ಭಾರತ ಸರ್ಕಾರದಿಂದ ಈ ಜಮೀನುಗಳ ಬಿಡುಗಡೆ ಕೋರುವ ಅವಶ್ಯಕತೆ ಇರುವುದಿಲ್ಲವೆಂದು ಒಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಅರಣ್ಯ ಇಲಾಖೆಯು ಇದಕ್ಕೆ ಒಪ್ಪಿಗೆ ಸೂಚಿಸಿದೆ ಆದುದರಿಂದ ಈ ಜಮೀನುಗಳ ಬಗ್ಗೆ ಕಂದಾಯ ಇಲಾಖೆಯು 1970ಕ್ಕೆ ಮೊದಲು ಗುತ್ತಿಗೆಗೆ ಕೊಟ್ಟಿರುವ ಜಮೀನುಗಳ ಹಂಗಾಮಿ ಲಗಾಣಿಗಳನ್ನು ಸೇರಪಾಗಿ ಖಾಯಂ ಮಾಡಿಬಿಹುದಾಗಿದೆ.

ಈ ಬಗ್ಗೆ ದಿನಾಂಕ 3.3.93ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹಂಗಾಮಿ ಲಗಾಣಿಗಳನ್ನು ಖಾಯಂ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡಿದೆ. ಅದರಂತೆ ಸರ್ಕಾರವು ಕಾನೂನಿನ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಇದರ ಬಗ್ಗೆ ಮಾನ್ಯ ದೇಶಪಾಂಡೆಯವರು ನನ್ನ ಹತ್ತಿರ ಅನೇಕ ಸಲ ಬಂದಿದ್ದಾರೆ. ಒಂದು ಇದನ್ನು ಅದಷ್ಟು ಜಾಗ್ರತೆ ತೀರ್ಮಾನ ಕೈಗೊಳ್ಳಬೇಕು ಎಂದು ಒತ್ತಾಯ ಮಾಡಿದರು. ಅದ್ದರಿಂದ ಸರ್ಕಾರ ಈಗಾಗಲೇ ಇದನ್ನು ತೀರ್ಮಾನ ತೆಗೆದುಕೊಂಡಿದೆ. ಈ ಜಮೀನುಗಳನ್ನು ಅವರಿಗೆ ಖಾಯಂ ಮಾಡಿ ಕೊಡುತ್ತೇವೆ ಮತ್ತು ಫಾರೆಸ್ಟ್ ಇಲಾಖೆಯಿಂದ ಇದರ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ರಾಜ್ಯದ ಅರ್ಥ ಮಂತ್ರಿಗಳಾಗಿದ್ದಾಗ ಈ ಕಡು ಬಡವರಿಗೆ ಜಮೀನನ್ನು ಬಿಡುಗಡೆ ಮಾಡಿದ್ದರು. ಬಹಳ ಪರಿಶ್ರಮದಿಂದ ಈ ಸಮಸ್ಯೆ ಇತ್ತು. ನಮ್ಮ ಕಾಲದಲ್ಲಿ ಒಂದು ಹಂತಕ್ಕೆ ತಂದಿದ್ದೆವು. ನನಗೆ ಬಹಳ ಸಂತೋಷ ಆಗಿದೆ. ನಾನು ಸರ್ಕಾರಕ್ಕೆ ಮತ್ತು ಕಂದಾಯ ಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಏಕೆಂದರೆ ಇದು ಒಂದು ನಿರ್ಣಯ ತಂದಿದ್ದೀರಿ. ಇದು ನಮ್ಮ ಜಿಲ್ಲೆಯಲ್ಲಿ ಜ್ವಲಂತ ಸಮಸ್ಯೆ ಆಗಿತ್ತು. ಈ ಸಮಸ್ಯೆಯನ್ನು ಬಗೆಹರಿಸಿ ಎಷ್ಟೋ ಜನರ ಆಶೀರ್ವಾದಕ್ಕೆ ಸಹ ತಾವೂ ಪಾತ್ರರಾಗಿದ್ದೀರಿ. ಮಾನ್ಯ ಕಿರ್ಗಯಿಯವರು ಕಂದಾಯ ಸಚಿವರಾಗಿದ್ದಾಗ ಅವರ ಗಮನಕ್ಕೂ ಸಹ ನಾನು ತಂದಿದ್ದೆ. ಅವರೂ ಸಹ ಆ ಸಮಯದಲ್ಲಿ ಅದರ ಬಗ್ಗೆ ಪ್ರಾಕಷ್ಟು ಪ್ರಯತ್ನ ಮಾಡಿದ್ದರು. ಹಾಗಾಗಿ ಒಂದೇ ಒಂದು ವಿಷಯ ಕೇಳುತ್ತೇನೆ. ತಾವು ಡಿಮ್ಯಾಂಡ್ ಫುಲ್‌ಫಿಲ್ ಮಾಡಿದ್ದೀರಿ. ಎಷ್ಟು ದಿವಸದೊಳಗೆ ಸರ್ಕಾರದಿಂದ ಆಜ್ಞೆ ಹೊರಡಿಸುತ್ತೀರಿ ?

ಶ್ರೀ ಎ. ರಾಜಶೇಖರಮೂರ್ತಿ:– ಈಗ ತಾನೇ ತೀರ್ಮಾನ ತೆಗೆದುಕೊಂಡಿದ್ದೇವೆ. ಇಮ್ಮಡಿಯಾಟ್ ಆಗಿ ನಮ್ಮ ಜಿಲ್ಲಾಧಿಕಾರಿಗೆ ಇದನ್ನು ಕಳುಹಿಸಿ ಅವರಿಗೆ ಅದಷ್ಟು ಬೇಗ ಇದನ್ನು ಖಾಯಂ ಮಾಡಿಕೊಂಡು ಎಂದು ಆದೇಶ ಕೊಡುತ್ತೇನೆ.

5.45 ಪಿ. ಎಂ.

ನಿಯಮ 334ರ ಮೇರೆಗೆ

ಸಹಕಾರಿ ಕಾಯ್ದೆಯಡಿಯಲ್ಲಿ ಅಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳಿಗೆ ಪ್ರವಾಸ ಭತ್ಯೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ಸಹಕಾರಿ ಕಾಯ್ದೆ (ರಾಜ್ಯ) ಕೆಳಗೆ ಕೆಲಸ ಮಾಡುತ್ತಿರುವ ಅಧ್ಯಕ್ಷರು ಹಾಗೂ ಇತರೆ ಪದಾಧಿಕಾರಿಗಳವರಿಗೆ, ಆಡಳಿತ ಮಂಡಳಿ

ಸದಸ್ಯರಿಗೆ ಅವರು ಕಛೇರಿ ಆಡಳಿತ ಮಂಡಲಿ ಸಭೆಗೆ ಬಂದು ಹೋಗಲು ಪ್ರವಾಸ ಭತ್ಯೆ ಹಾಗೂ ಸಿಟ್ಟಿಂಗ್ ಫೀ, ಗೌರವ ಧನ ಬಗ್ಗೆರೆ ನಿಗದಿ ಮಾಡಿದ್ದು ಯಾವ ಕಾಲದಲ್ಲಿ ? ಆದರಿಂದೀಚೆಗೆ ಎಷ್ಟು ಸಲ ಅಧಿಕಾರಿಗಳ ಪ್ರವಾಸ ಭತ್ಯೆ, ಸಂಬಳ, ದಿನಭತ್ಯೆ ಹೆಚ್ಚಾಗಿದೆ ? ಹಾಗಿದ್ದೂ ಆಡಳಿತ ಮಂಡಳಿಯ ಸದಸ್ಯರ ಹಾಗೂ ಅಧ್ಯಕ್ಷರ ದಿನಭತ್ಯೆ, ಪ್ರವಾಸ ಭತ್ಯೆಯಲ್ಲಿ ಬದಲಾವಣೆಯಾಗದಿರಲು ಕಾರಣವೇನು ? ಈ ದುಬಾರಿ ಕಾಲದಲ್ಲಿ ಸಭೆಗೆ ವಾಹನಗಳಲ್ಲಿ (ಸ್ವಂತ) ಬಂದು ಹೋಗುವ ಸದಸ್ಯರಿಗೆ ಕೊಡುತ್ತಿರುವ ಪ್ರವಾಸ ಭತ್ಯೆ ಹಾಗೂ ದೂರದ ಜಿಲ್ಲೆ ಹಾಗೂ ರಾಜ್ಯ ಕೇಂದ್ರಗಳಲ್ಲಿ ತಂಗಿದ್ದು ಸಭೆಯಲ್ಲಿ ಭಾಗವಹಿಸಲು ಬರುವ ಖರ್ಚಿಗೆ ಸರಿದೂಗುವಂತೆ ಇದೆಯೆ ? ಇಲ್ಲವಾದಲ್ಲಿ ಸದರಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಪ್ರತಿನಿಧಿಗಳಿಗೆ ಭತ್ಯೆ, ಪ್ರವಾಸ ಭತ್ಯೆಯನ್ನು ಹೆಚ್ಚಿಸಲಾಗುವುದೆ ? ಹಾಗಿದ್ದರೆ ಯಾವ ದಿನದಿಂದ ರೂಲ್ಸ್‌ಗೆ ತಿದ್ದುಪಡಿ ತರುವಿರಿ ? ಇದನ್ನು ವೈಜ್ಞಾನಿಕ ಆಧಾರದ ಮೇಲೆ ಹಾಗೂ ಈಗಿನ ಖರ್ಚಿನ ಹಿನ್ನೆಲೆಯಲ್ಲಿ ನಿಗದಿ ಮಾಡುತ್ತೀರಾ ಎಂಬುದನ್ನು ಮಾನ್ಯ ಸಹಕಾರ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ನಿಯಾಮವಳಿ 1960 ನಿಯಮ 21 (ಎ) ಪ್ರಕಾರ ಆಡಳಿತ ಮಂಡಳಿಯ ಸದಸ್ಯರ ದಿನಭತ್ಯೆ, ವಾಹನ ಭತ್ಯೆ ಮತ್ತು ಸಿಟ್ಟಿಂಗ್ ಫೀಗಳನ್ನು ನಿಗದಿಗೊಳಿಸಬಹುದಾಗಿರುತ್ತದೆ.

1980ರಲ್ಲಿ ದಿನಭತ್ಯೆ, ವಾಹನ ಭತ್ಯೆ ಮತ್ತು ಸಿಟ್ಟಿಂಗ್ ಫೀಗಳನ್ನು ಹೆಚ್ಚಿಸಲಾಗಿತ್ತು.

ಈಗ ಎಲ್ಲಾ ಬೆಲೆಗಳು ಏರಿರುವುದರಿಂದ, ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ದಿನಭತ್ಯೆ, ವಾಹನ ಭತ್ಯೆ ಮತ್ತು ಸಿಟ್ಟಿಂಗ್ ಫೀಗಳನ್ನು ಹೆಚ್ಚಿಸಲು ಕೋರಿರುತ್ತಾರೆ.

ಇದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ, ಈ ಬಗ್ಗೆ ಸಭ್ಯದಬ್ಬ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ ಬಗ್ಗೆ ಬೇಗನೆ ತೀರ್ಮಾನ ತೆಗೆದುಕೊಂಡು ಸೂಕ್ತ ಎಂದರೆ ಭತ್ಯೆ ಹಾಗೂ ಫೀಗಳನ್ನು ಹೆಚ್ಚಿಸಿ ಮಾಡತಕ್ಕಂಥ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ.

2. "ದಿವಾನ" ಎಂಬ ಹೆಸರಿನ ಆರೋಗ್ಯಕ್ಕೆ ಹಾನಿಕರ ಚಾಕಲೇಟ್ ಬೆಂಗಳೂರು ನಗರದಲ್ಲಿ ಮಾರಾಟವಾಗುತ್ತಿರುವ ಬಗ್ಗೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಅಧ್ಯಕ್ಷರೇ, ದಿವಾನ ಎಂಬ ಹೆಸರಿನ ಚಾಕಲೇಟ್ ಬೆಂಗಳೂರು ನಗರದ ಚಿಲ್ಲರೆ ಅಂಗಡಿಗಳಲ್ಲಿ ಮಾರಾಟವಾಗುತ್ತಿದೆ. ಈ ಚಾಕಲೇಟ್ ಆರೋಗ್ಯಕ್ಕೆ ಹಾನಿಕರ ಮತ್ತು ಈ ಚಾಕಲೇಟ್ ಲಕ್ಕಿ ಲಾಟರಿ ಪದ್ಧತಿಯಲ್ಲಿದೆ ಇದರಿಂದ ಶಾಲಾ ಮಕ್ಕಳು ಈ ಚಾಕಲೇಟ್ ಕೊಂಡು ತಿಂದ ಪರಿಣಾಮವಾಗಿ ಅನೇಕ ಶಾಲಾ ಮಕ್ಕಳಿಗೆ ಆರೋಗ್ಯ ಕೆಟ್ಟಿದೆ ಮತ್ತು ಲಕ್ಕಿ ಲಾಟರಿ ಪದ್ಧತಿ ಇರುವುದರಿಂದ ಶಾಲಾ ಮಕ್ಕಳು ಶಾಲೆಗೆ ಹೋಗದೆ, ಹಣವನ್ನು ಪೋಲು ಮಾಡುತ್ತಿದ್ದಾರೆ. ಆದ್ದರಿಂದ, ಆರೋಗ್ಯ ಸಚಿವರು ಆರೋಗ್ಯಕ್ಕೆ ಹಾನಿಕರ ಮತ್ತು ದುಶ್ಚಟಪೀರಿತಕ್ಕ ದಿವಾನ ಚಾಕಲೇಟ್ ತಯಾರಿಕೆ ನಿಲ್ಲುವಂತೆ ಮಾಡಿ ಬೆಂಗಳೂರಿನ ವಿದ್ಯಾರ್ಥಿ ವೃಂದಕ್ಕೆ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡಲು ಆಹಾರ ಮತ್ತು ನಾಗರಿಕ ಸರಬರಾಜು ಸಚಿವರನ್ನು ಕೋರುತ್ತೇನೆ.

ಶ್ರೀ ಫ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಮಂತ್ರಿಗಳು) (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ದಿವಾನ ಎಂಬ ಹೆಸರಿನ ಚಾಕಲೇಟು ಬೆಂಗಳೂರು ನಗರದಲ್ಲಿ ಮಾರಾಟ ಆಗುತ್ತಿದ್ದಲ್ಲಿ, ಈ ಚಾಕಲೇಟಿನ ಸ್ಯಾಂಪಲ್‌ಗಳನ್ನು ಸ್ವಾಧೀನ ಶಾಲೆಯಲ್ಲಿ